ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸಮೀಕ್ಷೆ ಮಾಡುವ ಕಾರ್ಯ ಜಿಲ್ಲಾ ಪರಿಷತ್‌ನವರ ದ್ದಾಗಿದ್ದು, ಇತ್ತೀಚೆಗೆ ಈ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುತ್ತೇವೆ. ಅವರು ಹೊಸದಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಸಮೀಕ್ಷೆ ನಡೆಸಿ ಸರ್ಕಾರಕ್ಕೆ ಒಂದು ವರದಿ ಯನ್ನು ಕೊಡಲು ತಿಳಿಸಿದ್ದೇವೆ. ಆ ವರದಿ ಬಂದ ನಂತರ ತಮ್ಮ ಬಯಕೆಯನ್ನು ಈಡೇರಿಸಲು ಸರ್ಕಾರ ಆದಷ್ಟು ಬೇಗ ಪ್ರಯತ್ನ ಮಾಡುತ್ತದೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ.—ಕಳೆದ ೧೫ನೇ ತಾರೀಖಿನಿಂದ ಈ ಕೆಲಸವನ್ನು ಸರ್ಕಾರ ಜಿಲ್ಲಾ ಪರಿಷತ್‌ನವರಿಂದ ತೆಗೆದುಕೊಂಡಿದೆ. ಆದಕ್ಕೆ ಮುಂಚೆ ಜಿಲ್ಲಾ ಪರಿಷತ್‌ನವರು ಹೆಚ್ಚಾಗಿ ಫೇರ್ ಪ್ರೈಸ್ ಡಿಪೋಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಇದಕ್ಕೆ ರಿಪ್ಲೈ ಕೊಟ್ಟಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ನಾನು ತಮ್ಮನ್ನು ಕರೆದಾಗ ತಾವು ಇರಲಿಲ್ಲ...

ಶ್ರೀ ಸಿ. ಬೈರೇಗೌಡ.—ನಾನು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿದೆ ಇದು ಬಹಳ ಮುಖ್ಯ ವಾದ ಪ್ರಶ್ನೆ.

ಅಧ್ಯಕ್ಷರು.—ನಮಗೆ ಎಲ್ಲಾ ಪ್ರಶ್ನೆಗಳೂ ಮುಖ್ಯವಾದದ್ದೇ ಮುಖ್ಯ, ಅಮುಖ್ಯವೆಂಬುದು ಇಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರಾಣೆಬೆನ್ನೂರು ಜನರಲ್ ಆಸ್ಪತ್ರೆಯ ವಿಸ್ತರಣೆ ಬಗ್ಗೆ

೧೯೬. ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಣೆಬೆನ್ನೂರು ಜನರಲ್ ಆಸ್ಪತ್ರೆಯನ್ನು ೩೦ ಹಾಸಿಗೆಯಿಂದ ೫೦ ಹಾಸಿಗೆಗಳಿಗೆ ವಿಸ್ತರಿಸಲು ಮುಖ್ಯ ಮಂತ್ರಿಗಳು ಅಶ್ವಾಸನೆ ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಇದರ ಒಟ್ಟು ವೆಚ್ಚ ಎಷ್ಟಾಗುತ್ತದೆ ? ಮತ್ತು ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಅ) ಹೌದು

ಆ) ಅಂದಾಜು ರೂ. ೨೬.೫೦ ಲಕ್ಷಗಳು ಹಣದ ಲಭ್ಯತೆಯನ್ನು ಅನುಸರಿಸಿ ಮುಂಜೂರಾತಿ ಯನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು.

ವಿಕ್ಟೋರಿಯಾ ಆಸ್ಪತ್ರೆಗೆ ಬೇಕಾದ ಎಕ್ಸ್‌ರೇ ಯಂತ್ರಗಳ ಬಗ್ಗೆ

೧೯೫. ಶ್ರೀ ಸಿ. ಬೈರೇಗೌಡ (ವೇಮಗಲ್). —ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ವಿಕ್ಟೋರಿಯಾ ಆಸ್ಪತ್ರೆಗೆ ಬೇಕಾದ ಬೇರೆ ಬೇರೆ ನಮೂನೆಯ ಎಕ್ಸರೇ ಯಂತ್ರಗಳೆಷ್ಟು ?

ಆ) ಈಗಾಗಲೇ ಸ್ಥಾಪಿಸಿದ ಯಂತ್ರಗಳೆಷ್ಟು, ಅವುಗಳಲ್ಲಿ ಎಷ್ಟು ಯಂತ್ರಗಳು ಪ್ರಯೋಜನ ಸ್ಥಿತಿಯಲ್ಲಿವೆ ?

ಇ) ಎಷ್ಟು ಯಂತ್ರಗಳು ಹಾಳಾಗಿವೆ ಮತ್ತು ಯಾವ ಯಾವ ಯಂತ್ರಗಳು ಎಂದಿನಿಂದ ಹಾಳಾಗಿವೆ ?